# ಹಿರಿತಲೆ ಪುರಾಣ

■ ತುಂಬಾಡಿ ರಾಮಯ್ಯ
ಕಲೆ: ಭಾವು ಪತ್ತಾರ್

ಚನ್ನಂಗಿದುರ್ಗದ ಉತ್ತರಕ್ಕೆ ಮರಿ ಹಿಮಾಲಯ ಪರ್ವತದಂಥ ಬೆಟ್ಟ ಸಾಲಿದೆ. ಬೆಟ್ಟ ಸಾಲು ದಾಟಿ ಐದಾರು ಮೈಲಿ ನಡೆದರೆ ನೂರು ಮನೆಗಳ ಗೊಲ್ಲೇರಿ ಎಂಬ ಗ್ರಾಮವಿದೆ. ಗೊಲ್ಲೇರಿ ಅತ್ತ ಬಯಲು ಸೀಮೆಯೂ ಅಲ್ಲದ, ಇತ್ತ ಮಲೆನಾಡಿಗೂ ಸಲ್ಲದಂತಿದೆ. ಬೆಟ್ಟ ಸಾಲು ಟುಮಕಿಪುರದಿಂದ ಪ್ರಾರಂಭವಾಗಿ, ಕಮಲಪುರ ಸುತ್ತುವರಿದು ಚನ್ನಂಗಿದುರ್ಗ ಬಳಸಿ ಅಂಕುಡೊಂಕಾಗಿ ತೆಲುಗುನಾಡಿನತ್ತ ಚಾಚಿಕೊಂಡಿದೆ. ಬೆಟ್ಟ ಸಾಲಿನ ಒಡಲಲ್ಲಿ ಹಲವು ನದಿಗಳು ಹುಟ್ಟು ಪಡೆಯುತ್ತವೆ. ಗೊಲ್ಲೇರಿ ಗ್ರಾಮದ ಬೆನ್ನಿಗಿರುವ ಬೆಟ್ಟವನ್ನು ಹಿರೇ ಬೆಟ್ಟವೆಂದು ಕರೆಯುವರು. ಹಿರೇಬೆಟ್ಟ ದೂರದಿಂದ ನೋಡಿದರೆ ಜಟೆ ಕೆದರಿದ ಶಿವನು ತಪ್ಪಸ್ಸಿಗೆ ಕುಂತಂತಿದೆ. ಬೆಟ್ಟದ ನೆತ್ತಿಯ ಹೊತ್ತುಟ್ಟ ದಿಕ್ಕಲ್ಲಿ, ಎಡಕೊಂದು ಬಲಕೊಂದು ಸಣ್ಣ ಒರತೆ ವರ್ಷೊಂಬತ್ತು ಕಾಲ ಜಿನುಗುತ್ತಿರುತ್ತವೆ. ಮಳೆಗಾಲ ಬಂತೆಂದರೆ ಮೈದುಂಬಿಕೊಳ್ಳುತ್ತವೆ. ಹಸಿರು ರಾಶಿಯ ಮಧ್ಯೆ ಹಾಲ್ಹರಿಯಂತೆ ಇಳಿಯುತ್ತವೆ. ಆ ದೃಶ್ಯ ನೋಡುಗರಿಗೆ ಶಿವನ ಜಟೆಯಿಂದ ಗಂಗೆ ಹಾಲಾಗಿ ಧರೆಗಿಳಿಯುವಂತೆ ಕಾಣುತ್ತದೆ, ಒಂಟಿಯಾಗಿ ಹೊರಟ ಒರತೆ ಬೆಟ್ಟದ ಬುಡದಲ್ಲಿ ಎರಡೂ ಸೇರಿ ಕಿರು ಹಳ್ಳವಾಗುತ್ತದೆ. ಎರಡೊಂದಾಗಿ ಒಮ್ಮೆಲೆ ಬಿರುಸಾಗಿ, ಮಾರಿ ಹಳ್ಳವೆಂದು ಹೆಸರು ಪಡೆಯುತ್ತದೆ. ಗೊಲ್ಲೇರಿ ಗ್ರಾಮ ಒಂದು ಮೈಲಿ ಇರುವಂತೆ ಮಾರಿಹಳ್ಳ ಎಡ ತಿರುವು ಪಡೆಯುತ್ತದೆ. ಹಳ್ಳವೊಂದು ತಿರುವು ಪಡೆದ ರೀತಿಯನ್ನು ನೋಡಿದವರು ತಮ್ಮ ಭಾವಕ್ಕೆ ತಕ್ಕಂತೆ

